1.	ನಾರಾಯಣಪೂರ	ಎಸ್‌ಆರ್ ಸಿ	5.00	77	190
2.	ಪತ್ರಾಪೂರ	- ಸದರಿ -	5.00	77	190
3.	ತ್ರಿಪೂರಾಂತ	- ಸದರಿ -	7.00	144	356
		ಒಟ್ಟು	319.327	2185	5396

ಆ) ಪ್ರತಿ ಕೆರೆಯಿಂದ ವಿನ್ಯಾಸದಂತೆ ನೀರಾವರಿ ಪ್ರದೇಶದ ವಿವರವನ್ನು 'ಅ' ಗೆ ನೀಡಿರುವ ಉತ್ತರದ ಕಲಂ 5 ಮತ್ತು 6 ರಲ್ಲಿ ನೀಡಲಾಗಿದೆ.

ಇ) - ಹೌದು -

ಈ) ಹಳೆಯ ಕೆರೆಗಳಿಗೆ ಅಭಿವೃದ್ಧಿಪಡಿಸಲು ಸರ್ಕಾರದ ವತಿಯಿಂದ ಹಲವಾರು ಯೋಜನೆಗಳು ಜಾರಿಯಲ್ಲಿವೆ. ಅವುಗಳೆಂದರೆ:

1. ಕೆರೆಗಳ ಅಧುನೀಕರಣ
2. ಕೆರೆಗಳ ಜೀರ್ಣೋದ್ಧಾರ
3. ಕಾಯಕ ಕೆರೆ ಯೋಜನೆಯಡಿಯಲ್ಲಿ ಹಳೆಯ ಕೆರೆಗಳ ಪುನರುಜ್ಜೀವನ ಮಾಡುವುದು.
4. ಕೆರೆಗಳಲ್ಲಿ ಹೂಳೆತ್ತುವುದು.

ಮೇಲಿನ ಕಾರ್ಯಕ್ರಮದಡಿಯಲ್ಲಿ ಕೆರೆಗಳ ನೀರು ಶೇಖರಣಾ ಸಾಮರ್ಥ್ಯ ಉಳಿಸುವುದು, ಒಡ್ಡು ಬಲಪಡಿಸುವುದು, ಕಾಲುವೆಗಳು ಸುಧಾರಿಸಿ ಕೃಷಿಕರ ಭೂಮಿಗೆ ಸಾಕಷ್ಟು ಪ್ರಮಾಣದಲ್ಲಿ ನೀರು ಒದಗಿಸಿಸುವುದು ಮುಂತಾದ ಕೆಲಸಗಳು ಸೇರಿವೆ.

ಬೀದರ್ ಜಿಲ್ಲೆಯಲ್ಲಿ ಶೀತಲ ಗೃಹಗಳ ಸ್ಥಾಪನೆ

1435 (1903) - ಶ್ರೀ ಎಂ.ಜಿ. ಮುಳೆ (ಬಸವ ಕಲ್ಯಾಣ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದ್ರಾಬಾದ್-ಕರ್ನಾಟಕ ಪ್ರದೇಶದ ಯಾವ ಸ್ಥಳಗಳಲ್ಲಿ ಶೀತಲಗೃಹಗಳನ್ನು (ಕೋಲ್ಡ್ ಸ್ಟೋರೇಜ್) ಸ್ಥಾಪಿಸಲಾಗಿದೆ?

ಆ) ಪ್ರಸಕ್ತ ಸಾಲಿನಲ್ಲಿ ಈ ಭಾಗದ ಯಾವ ಯಾವ ಸ್ಥಳಗಳಲ್ಲಿ ಶೀತಲಗೃಹಗಳನ್ನು ಸ್ಥಾಪಿಸಲಾಗುವುದು?

ಇ) ಬೀದರ್ ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಫಲೋತ್ಪಾದನೆ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿದ್ದು ಶೀತಲ ಗೃಹದ ವ್ಯವಸ್ಥೆ ಇಲ್ಲದೆ ಹಾಳಾಗುತ್ತಿರುವುದರಿಂದ ಶೀತಲ ಗೃಹವನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದೆ? ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ರಾಜ ಅಮರೇಶ್ವರ ನಾಯಕ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಬಳ್ಳಾರಿ ಜಿಲ್ಲೆಯಲ್ಲಿ 4 ಶೀತಲ ಗೃಹಗಳನ್ನು ಸ್ಥಾಪಿಸಿದೆ.

ಅ) ಈ ಭಾಗದಲ್ಲಿ ಸರ್ಕಾರಿ ವಲಯದಡಿ ಶೀಲತ ಗೃಹಗಳನ್ನು ಸ್ಥಾಪಿಸುವ ಪ್ರಸ್ತಾಪ ಇರುವುದಿಲ್ಲ.

ಇ) ಪ್ರಸ್ತಾವನೆ ಸ್ವೀಕೃತವಾದಲ್ಲಿ ಸರ್ಕಾರವು ಪರಿಶೀಲಿಸುವುದು.

ಹುಣಸೂರಿನ ಹಾರಂಗಿ ಬಲದಂಡೆ ನಾಲಾ ಕಾಮಗಾರಿ ಗುತ್ತಿಗೆದಾರರಿಗೆ ಹಣ ಬಿಡುಗಡೆ

1436 (1914) - ಶ್ರೀ ಪಾಪಣ್ಣ .ವಿ (ಹುಣಸೂರು) : ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1998/1999 ರಲ್ಲಿ ಹುಣಸೂರಿನ ಹಾರಂಗಿ ಬಲದಂಡೆ ನಾಲಾ ಕಾಮಗಾರಿ ಬಿಲ್ಲಿನ ಹಣದಲ್ಲಿ ಶೇಕಡ 25 ಕಡಿತಮಾಡಿ ನೀಡುವುದು ಎಂದು ಸರ್ಕಾರಕ್ಕೆ ಹಾಗೂ ಗುತ್ತಿಗೆದಾರರು ಒಪ್ಪಿದ್ದು ನಿಜವಲ್ಲವೇ;

ಆ) ಹಾಗಿದ್ದಲ್ಲಿ ಹುಣಸೂರಿನ ಹಾರಂಗಿ ಬಲದಂಡೆ ನಾಲೆ ಕಾಮಗಾರಿ ಬಿಲ್ಲು ಇನ್ನೂ ರೂ.30.00 ಲಕ್ಷಗಳು ಬಾಕಿ ಉಳಿದಿರುವುದು ಏಕೆ;

ಇ) ಶೇಕಡಾ 25 ಕಡಿತಗೊಳಿಸಿದ ಮೇಲೆ ಹಣ ನೀಡುವುದಕ್ಕೆ ತೊಂದರೆ ಏನು;

ಈ) ಯಾವಾಗ ಹಣ ಬಿಡುಗಡೆಗೊಳಿಸುತ್ತೀರಿ;

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) ಹೌದು.

ಆ) ಒಟ್ಟಾರೆ ರೂ. 88.24 ಲಕ್ಷಗಳ ಮೊತ್ತದ ತುಂಡುಗುತ್ತಿಗೆ ಕಾಮಗಾರಿ ಬಿಲ್ಲುಗಳಲ್ಲಿ ಮಾಹೆಯಾನ ಬಿಡುಗಡೆಯಾದ ಹಣ ಭರವಸೆ ಪತ್ರದಲ್ಲಿ ಆದ್ಯತೆಯ ಮೇಲೆ ಬಿಡುಗಡೆ ಮಾಡುತ್ತಿದ್ದು, ಇನ್ನುಳಿದ ರೂ.30.00 ಲಕ್ಷಗಳ ಬಾಕಿ ಬಿಲ್ಲುಗಳನ್ನು ಮುಂಬರುವ ಹಣ ಭರವಸೆ ಪತ್ರದಲ್ಲಿ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಲಭ್ಯತೆಯನುಸಾರ ಹಣ ಭರವಸೆ ಪತ್ರ ಬಿಡುಗಡೆ ಮಾಡಲಾಗುತ್ತಿದೆ.

ಈ) ಮಾಹೆಯಾನ ಬಿಡುಗಡೆಯಾಗುವ ಹಣ ಭರವಸೆ ಪತ್ರದಲ್ಲಿ ಜೇಷ್ಠತೆಯಾನುಸಾರ ಬಾಕಿ ಬಿಲ್ಲುಗಳ ಪಾವತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಅಂತರ್ಜಲ ಹೆಚ್ಚಿಸುವುದು

1437 (1221) - ಶ್ರೀ ಪಾಟೀಲ್ ಜೆ.ಟಿ. (ಬೀಳಗಿ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರತಿ ವರ್ಷವೂ ಅಂತರ್ಜಲ ಕಡಿಮೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಅಂತರ್ಜಲ ಹೆಚ್ಚಿಸಲು ಸರಕಾರ ಕೈಗೊಂಡ ಕ್ರಮಗಳೇನು?